ಅಂದೂ ಮುಂಭಾಗದಲ್ಲಿ ಕುದುರೆಗಾಡಿ ಬಂದು ನಿಂತಿತು. ದಟ್ಟ ಹಸಿರು ಬಣ್ಣದ ಮುಸುಕು ಹೊರಗಿಳಿಯಿತು. ಕೆಂಪಗಿನ ಪಾದಗಳನ್ನು ಇರಿಸುವಾಗ ವೇಗ ಕಾಣಿಸಿತು.

ಡಾಕ್ಟರ್ ಹಗಲಿಡೀ ರೋಗಿಯ ಕೋಣೆಯಲ್ಲಿಯೇ ಇದ್ದರು. ಸೊರಗಿದ ತೋಳಿಗೆ ಸೂಜಿ ಚುಚ್ಚುವಾಗ ರೋಗಿ ನರಳಿದ್ದರು. ಡಾಕ್ಟರು ಹೇಳಿದರು. ಎಚ್ಚರದಿಂದ ನೋಡಿಕೊಳ್ಳಬೇಕು.

ರೋಗವನ್ನು ಕುರಿತು ವಿಚಾರಿಸಲು ಬಂದ ಗೆಳೆಯರಲ್ಲಿ ಕೆಲವರು ಕೋಣೆಯಲ್ಲಿಯೂ ಹೊರಗೂ ಆತಂಕದಿಂದ ವ್ಯಾಕುಲಗೊಂಡು ನಿಂತಿದ್ದರು.



ನಿಮಿಷಗಳಿಗೆ ಭಾರಹೆಚ್ಚಿತು. ಕಾಯುವುದರ ನರಳಾಟ ಎಲ್ಲರ ಮುಖದಲ್ಲಿಯೂ ಕಾಣಬಹುದಿತ್ತು. ಬಿಸಿಲು ಮಂಕಾಯಿತು.ಯಾರೂ ಸ್ಥಳ ಬಿಟ್ಟು ಕದಲಲಿಲ್ಲ. ಮಾರ್ಬಲ್ ಸ್ಟೂಲಿನ ಮೇಲೆ ಮಿಸುಕಾಡದೆ ಕುಳಿತ ರೂಪದತ್ತ ಯಾರೂ ನೋಡಿರಲೇ ಇಲ್ಲ. ಎಲ್ಲಾ ಕಣ್ಣುಗಳು, ರೋಗ ಶಯ್ಯೆಯತ್ತ ಕೇಂದ್ರೀಕರಿಸಿದ್ದುವು.

ಸಂಜೆ ಸಮೀಪಿಸುತ್ತಲೇ ಮಗನ ಮನಸ್ಸಿನಲ್ಲಿ ಭೀತಿಯ ನೆರಳು ಗುರುತುಗಳು ಕಪ್ಪಿಟ್ಟುವು.

-ಹೀ ಈಸ್ ಸಿಂಕಿಂಗ್ . ಕಂ ಕ್ಲೋಸರ್

ಮಗನೂ ಭಯದಿಂದ ಸಮೀಪ ಬಂದು ನಿಂತ. ಆತ ಸಾವನ್ನು ಈ ಮೊದಲು ಕಂಡಿರಲಿಲ್ಲ. ಕಣ್ಣುಗಳು ಅರಳಿ ವೃತ್ತಗಳಾಗಿ ಬದಲಾಗುವುದನ್ನು ಮುಖ ಕಪ್ಪಿಡುವುದನ್ನು ಆತ ಕಂಡ, ಮಂಚದ ಸುತ್ತಲೂ ಜನರು ಒತ್ತೊತ್ತಾಗಿ ಸೇರಿಕೊಂಡರು. ಅಮ್ಮ, ಮಗ, ಗೆಳೆಯರು, ಪರಿಚಾರಕರು, ಹಿಂದಿನಿಂದ ಮಾರ್ಬಲ್ ಸ್ಟೂಲಿನ ಮೇಲೆ ಅಲುಗಾಡದೆ ಕುಳಿತ ಮುಸುಕಿನ ಕಣ್ಣುಗಳಿಗೆ ಆ ಮಾನವ ಭಿತ್ತಿಯ ಆಚೆಗೆ ಕಾಣುವುದು ಸಾಧ್ಯವಿಲ್ಲ. ಯಾರೂ ತಿರುಗಿ ನೋಡಲಿಲ್ಲ.

ಜೀವನದ ಆರಂಭವನ್ನೂ ಕೊನೆಯನ್ನು ಹಲವು ಬಾರಿ ಕಂಡ ಡಾಕ್ಟರ್ ಕಣ್ಣುಗಳನ್ನು ಮುಚ್ಚಿಸಿದರು. ಮುಖವನ್ನು ಮರೆಸಿದರು. ನೆಟ್ಟಗೆ ನಿಂತ ಮಗನ ಭುಜದಲ್ಲಿ ಕೈಯಿರಿಸಿಕೊಂಡು ಭಾವನಾತ್ಮಕವಾಗಿ ಸ್ವಲ್ಪ ಮೃದುವಾದ ಸ್ವರದಲ್ಲಿ ಹೇಳಿದರು: ಕಂಡೊಲೆನ್ಸ್ ಮೈ ಬಾಯ್.

ತಣ್ಣಗಿನ ಶರೀರದ ಮೇಲೆ ಮುಖವಿಟ್ಟು ಅಮ್ಮ ಜೋರಾಗಿ ಅತ್ತರು. ಆರಲಿರುವ ದೀಪದ ಬತ್ತಿಯಂತೆ ನೆಗೆದು ಹೊಳೆಯಿತು. ಮುದುಕನಾದ ತೋಟಮಾಲಿ ಕಣ್ಣುಗಳನ್ನು ಒರೆಸಿಕೊಂಡ. ಗೆಳೆಯರು ಮುಖ ಕೆಳಹಾಕಿ ಶೋಕ ವ್ಯಕ್ತಪಡಿಸಿದರು. ಮಗನಿಗೂ ಅಳಬೇಕೆಂದಿತ್ತು. ಯೌವ್ವನದಲ್ಲಿಯೇ ತಣ್ಣಗಾದ ಮನಸ್ಸಿಗೆ ಅದೊಂದು ಸಮಾಧಾನವಾದರೂ ಆಗಬಹುದಿತ್ತು. ಕಂಪಿಸುವ ಶರೀರದೊಡನೆ ಆತ ಮೆಲ್ಲನೆ ಬೆವರಿದ ಮುಖವೊರೆಸಿಕೊಳ್ಳುತ್ತ ಏನನ್ನೊ, ನೆನಪಿಸಿಕೊಂಡು ತಿರುಗಿನೋಡಿದ.

ಆ ಮಾರ್ಬಲ್ ಸ್ಟೂಲ್ ಬರಿದಾಗಿದೆ. ಮೆಟ್ಟಿಲುಗಳ ಬಳಿ ಮರೆಯಾಗುತ್ತಿದ್ದ ಕಡು ಹಸಿರು ಬಣ್ಣದ ಹಿಂಭಾಗವನ್ನು ಒಮ್ಮೆ ಆತ ನೋಡಿದ. ಸಾವಿನ ಶೋಕ ತುಂಬಿದ ವಾತಾವರಣದಲ್ಲಿ ಮನುಷ್ಯರು ಸೊರಗಿರುವಾಗ ದೂರದಿಂದಲೇ ಎಂಬಂತೆ ಕೊರಳ ಗಂಟಾನಾದ ಮಗನಿಗೆ ಕೇಳಿಸಿತು.

ಅಮ್ಮ ಮಗನನ್ನು ನೋಡಿದರು.

ಮಗ ಅಮ್ಮನನ್ನೂ.

ಕತ್ತಲಿನ ವಾತಾವರಣದಲ್ಲಿ ಒಮ್ಮೆಗೂ ಕೊನೆಯಾಗದ ಒಂದು ಸಂಗೀತದಂತೆ ಕೊರಳ ಗಂಟಾನಾದ ಮುಂದಕ್ಕೆ ದೀರ್ಘವಾಗಿ ಸಾಗುತ್ತಿತ್ತು.

●